# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 923

ವಿಧಾನ ಪರಿಷತ್ತು ಸದಸ್ಯರ : ಶ್ರೀಗೋವಿಂದರಾಜು

ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ : 21-12-2021

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 2020-21ನೇ ಸಾಲಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಸಮವಸ್ತ್ರ (ಸೀರೆ)ವನ್ನು ನೀಡಲಾಗಿದೆಯೇ; | "ಪೋಷಣ್ ಅಭಿಯಾನ" ಯೋಜನೆಯಡಿ 2020-21ನೇ ಸಾಲಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಒಂದು ಬಾರಿಗೆ ಸಮವಸ್ತ್ರ ನೀಡಲಾಗಿದೆ. |
| ಆ | ನೀಡಿದ್ದಲ್ಲಿ; ಎಷ್ಟು ಸೀರೆಗಳನ್ನು ವಿತರಿಸಲಾಯಿತು; ಅವುಗಳನ್ನು ಎಲ್ಲಿಂದ ಖರೀದಿಸಲಾಗಿದೆ; | 65911 ಅಂಗನವಾಡಿ ಕಾರ್ಯಕರ್ತೆಯರು ಮತ್ತು 62580 ಸಹಾಯಕಿಯರಿಗೆ ತಲಾ 2 ಸೀರೆಗಳಂತೆ ಒಟ್ಟು 256982 ಸೀರೆಗಳನ್ನು Gem Portal ಮೂಲಕ Silk Fashion Exports, Bengaluru, ಸಂಸ್ಥೆಯ ಮೂಲಕ ಖರೀದಿಸಲಾಗಿರುತ್ತದೆ. |
| ಇ | ಸರ್ಕಾರದ ವತಿಯಿಂದ ನಡೆಯುತ್ತಿರುವ "ಪೋಷಣ್ ಅಭಿಯಾನ" ಎಂಬ ಕಾರ್ಯಕ್ರಮ ಕೇಂದ್ರ ಸರ್ಕಾರದ ಕಾರ್ಯಕ್ರಮವೇ ಅಥವಾ ರಾಜ್ಯ ಸರ್ಕಾರದ ಕಾರ್ಯಕ್ರಮವೇ; | "ಪೋಷಣ್ ಅಭಿಯಾನ" ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ (ಕೇಂದ್ರ 60% ರಾಜ್ಯ 40%) ಅನುಷ್ಠಾನಗೊಳಿಸಲಾಗುತ್ತಿದೆ. |
| ಈ | ಪೋಷಣ್ ಅಭಿಯಾನ ದಡಿಯಲ್ಲಿ ಕಾರ್ಯಕರ್ತೆಯರಿಗೆ ನೀಡಲಾಗಿರುವ ಸೀರೆಯ ಮೇಲೆ "ಪೋಷಣ್ ಅಭಿಯಾನ" ಎಂಬುದಾಗಿ ಮುದ್ರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಅನುಮತಿ ನೀಡಿದ ಅಧಿಕಾರಿ ಯಾರು; | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ದಿನಾಂಕ:04/09/2020 ರ ಕೇಂದ್ರ ಸರ್ಕಾರದ ಮಾರ್ಗಸೂಚಿಯ ಷರತ್ತಿನಲ್ಲಿ ಸದರಿ ಯೋಜನೆಯಡಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ನೀಡುವ ಸಮವಸ್ತ್ರದಲ್ಲಿ "ಪೋಷಣ್ ಅಭಿಯಾನ"ದ ಲೋಗೋವನ್ನು ಮುದ್ರಿಸಲು ತಿಳಿಸಲಾಗಿರುತ್ತದೆ. |
| ಉ | ಈ ರೀತಿಯ ಮುದ್ರಣದಿಂದ ಮಹಿಳಾ ಕಾರ್ಯಕರ್ತೆಯರಿಗೆ ಮುಜುಗರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿ?ಯೇ | ಬಂದಿರುತ್ತದೆ. |

**ಸಂ: ಮಮಇ 323 ಐಸಿಡಿ 2021**

Halappa

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.